ಬಿತ್ತನೆ ಬೀಜ ಮಾರಾಟ

06-07-2024
S-karnataka
Pg 09

ಬೆಂಗಳೂರು: ಇದೇ ಪ್ರಥಮ ಬಾರಿಗೆ ಆನ್‌ಲೈನ್ ಮೂಲಕ ಬೀಜ ಮಾರಾಟ ಜಾಲತಾಣ (www.uasgkvkseeds.org)ವನ್ನು ಕೃಷಿ ವಿಶ್ವವಿದ್ಯಾನಿಲಯ ಹಾಗೂ ಅಖಿಲ ಭಾರತ ಸುಸಂಘಟಿತ ಪ್ರಾಯೋಜಕತ್ವದಲ್ಲಿ (ಬೀಜ ಬೆಳೆಗಳು) ಅಭಿವೃದ್ಧಿಪಡಿಸಲಾಗಿದೆ.ಬೆಂ.ಕೃಷಿ ವಿವಿ ವ್ಯಾಪ್ತಿಗೆ ಒಳಪಡುವ 10 ಜಿಲ್ಲೆಗಳಿಗೆ ಸೂಕ್ತವಾದ ವಿವಿಧ ಬೆಳೆ (ರಾಗಿ, ಭತ್ತ, ತೊಗರಿ, ಅವರೆ, ಸಿರಿಧಾನ್ಯಗಳು) ತಳಿಗಳ ಬೀಜ ಹಾಗೂ ಪ್ರಮಾಣಿತ ಬಿತ್ತನೆ ಬೀಜ ಮತ್ತು ಎಣ್ಣೆಕಾಳು ಬೆಳೆಗಳಾದ ಸಂಕರಣ ಸೂರ್ಯಕಾಂತಿ ಬಿತ್ತನೆ ಬೀಜ ಲಭ್ಯವಿರುತ್ತವೆ.

ರೈತರು ಈ ಸೌಲಭ್ಯವನ್ನು ಕ್ಯೂಆರ್ ಕೋಡ್‌ಸ್ಕ್ಯಾನ್ ಮಾಡಿ ಬೀಜ ಜಾಲತಾಣ ಪ್ರವೇಶಿಸಿ ಖರೀದಿಸಬಹುದಾಗಿದೆ. ನೋಂದಣಿ ಮಾಡುವಾಗ ಪೂರ್ಣವಿಳಾಸ ನಮೂದಿಸುವುದು ಹಾಗೂ ಬಿತ್ತನೆ ಬೀಜದ ಮೊತ್ತವನ್ನು ಆನ್‌ಲೈನ್ (ಉದಾಹರಣೆ: ಗೂಗಲ್ ಪೇ, ಫೋನ್ ಪೇ ಇತ್ಯಾದಿ) ಮೂಲಕ ಪಾವತಿಸುವುದು. ಬಿತ್ತನೆ ಬೀಜಗಳನ್ನು ಅಂಚೆ ಇಲಾಖೆ ಮೂಲಕ ರೈತರ ಮನೆ ಬಾಗಿಲಿಗೆ ಸರಬರಾಜು ಮಾಡಲಾಗುತ್ತದೆ ಎಂದು ವಿಶ್ವವಿದ್ಯಾನಿಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಆನ್‌ಲೈನ್ ಮೂಲಕ ಬೀಜ ಮಾರಾಟ

06-07-2024
Hosadiganta
Pg 12

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯ, ಅಖಿಲ ಭಾರತ ಸುಸಂಘಿತ ಪ್ರಾಯೋಜನೆ (ಬೀಜ ಬೆಳೆಗಳು) ವತಿಯಿಂದ ಇದೇ ಪ್ರಥಮ ಬಾರಿಗೆ ಆನ್‌ಲೈನ್ ಮೂಲಕ ಬೀಜ ಮಾರಾಟ ಜಾಲತಾಣವನ್ನು ಅಭಿವೃದ್ಧಿಪಡಿಸಿದೆ.

ಬೀಜ ಜಾಲತಾಣದಲ್ಲಿ www.uasgkvkseeds.org ರೈತರು ನೋಂದಣಿ ಮಾಡಿಕೊಂಡು ನೇರವಾಗಿ ಬಿತ್ತನೆ ಬೀಜಗಳನ್ನು ಖರೀದಿಸಬಹುದಾಗಿದೆ. ನೊಂದಣಿ ಮಾಡುವಾಗ ಪೂರ್ಣವಿಳಾಸ, ಸರಿಯಾದ ಪಿನ್ ಕೋಡ್‌ಅನ್ನು ಕಡ್ಡಾಯವಾಗಿ ನಮೂದಿಸುವುದು ಹಾಗೂ ಬಿತ್ತನೆ ಬೀಜದ ಮೊತ್ತವನ್ನು ಆನ್‌ಲೈನ್ ಗೂಗಲ್ ಪೇ, ಪೋನ್ ಪೇ ಇತ್ಯಾದಿ ಮೂಲಕ ಪಾವತಿಸಬಹುದಾಗಿದೆ.

ಮನೆ ಬಾಗಿಲಿಗೆ ಸರಬರಾಜು: ಬಿತ್ತನೆ ಬೀಜಗಳನ್ನು ಅಂಚೆ ಇಲಾಖೆ ಮೂಲಕ ರೈತರ ಮನೆ ಬಾಗಿಲಿಗೆ ಸರಬರಾಜು ಮಾಡಲಾಗುವುದು. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ವ್ಯಾಪ್ತಿಗೆ ಬರುವ 10 ಜಿಲ್ಲೆಗಳಿಗೆ ಸೂಕ್ತವಾದ ವಿವಿಧ ಬೆಳೆಗಳಾದ ರಾಗಿ, ಭತ್ತ, ತೊಗರಿ, ಅವರೆ, ಸಿರಿಧಾನ್ಯಗಳು ತಳಿಗಳ ನಿಜ ಬೀಜ ಹಾಗೂ ಪ್ರಮಾಣಿತ ಬಿತ್ತನೆ ಬೀಜ ಮತ್ತು ಎಣ್ಣೆಕಾಳು ಬೆಳೆಗಳಾದ ಸಂಕರಣ ಸೂರ್ಯಕಾಂತಿ ಬಿತ್ತನೆ ಬೀಜ ಲಭ್ಯವಿರುತ್ತದೆ.

ಆಸಕ್ತ ರೈತರು ಬಿತ್ತನೆ ಬೀಜವನ್ನು ರಾಷ್ಟ್ರೀಯ ಬೀಜ ಪ್ರಾಯೋಜನೆ (ಎನ್.ಎಸ್.ಪಿ),ಕೃಷಿತಂತ್ರಜ್ಞಾನಮಾಹಿತಿಕೇಂದ್ರ (ಎ.ಟಿ.ಐ.ಸಿ), ಜಿ.ಕೆ.ವಿ.ಕೆ ಮತ್ತು ಕೃಷಿ ವಿಜ್ಞಾನ ಕೇಂದ್ರಗಳಾದ ಚಾಮರಾಜನಗರ, ಕಂದಲಿ, ಹಾಸನ, ಚಿಂತಾಮಣಿ ಮತ್ತು ವಲಯ ಕೃಷಿ ಸಂಶೋಧನಾಕೇಂದ್ರ, ವಿ.ಸಿ.ಫಾರಂ, ಮಂಡ್ಯ ಹಾಗೂ ರಾಗಿ ಬ್ರಹ್ಮ ಲಕ್ಷ್ಮಣಯ್ಯನವರ ರೈತ ಸಲಹಾ ಕೇಂದ್ರ ಎ.ಪಿ.ಎಂ.ಸಿ.ಯಾರ್ಡ್, ಮಂಡ್ಯ ಕೇಂದ್ರಗಳಿಂದ ಖರೀದಿಸಬಹುದಾಗಿದೆ ಎಂದು ಕೃಷಿ ವಿಶ್ವ ವಿದ್ಯಾನಿಲಯ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಹಲವೆಡೆ ರೈತರಿಗೆ ಸಮರ್ಪಕವಾಗಿ ಸಿಗದ ಯಂತ್ರೋಪಕರಣ | ಯಂತ್ರ ನಡೆಸಲು ಅನುಭವಿಗಳ ಕೊರತೆ

ಸಣ್ಣ ರೈತರಿಗೆ ಕೈಗೆಟುಕದ ಕೃಷಿ ಯಂತ್ರಧಾರೆ!

06-07-2024
V-karnataka
Pg 05

ಆದರ್ಶ ಕೋಡಿ ಬೆಂಗಳೂರು ಗ್ರಾಮಾಂತರ
adarshkodi15@gmail.com

ಕೃಷಿ ಯಂತ್ರೋಪಕರಣಗಳನ್ನು ಖರೀದಿ ಮಾಡಲಾಗದ ಸಣ್ಣ ಮತ್ತು ಮಧ್ಯಮ ರೈತರ ಅನುಕೂಲಕ್ಕೆಂದು ಸರಕಾರ ಆರಂಭಿಸಿದ್ದ ಕೃಷಿ ಯಂತ್ರಧಾರೆ ರಾಜ್ಯದಲ್ಲಿ ಸಂಪೂರ್ಣ ಅತಂತ್ರಗೊಂಡಿದೆ.

ಈಗ ರಾಜ್ಯದಲ್ಲಿ ಉತ್ತಮ ಮುಂಗಾರು ಆಗುತ್ತಿದ್ದು, ಕೃಷಿ ಚಟುವಟಿಕೆಗಳು ಗರಿಗೆದರಿವೆ. ರೈತರಿಗೆ ಉಳುಮೆ ಮತ್ತಿತರ ಕಾರ್ಯಕ್ಕೆ ಯಂತ್ರೋಪಕರಣಗಳ ಅಗತ್ಯ ಹೆಚ್ಚಾಗಿದೆ. ಆದರೆ, ಕೃಷಿ ಸಂಪರ್ಕ ಕೇಂದ್ರಗಳಲ್ಲಿ ಯಂತ್ರೋಪಕರಣಗಳೇ ಸಿಗದೆ ರೈತರು ತೊಂದರೆ ಎದುರಿಸುತ್ತಿದ್ದಾರೆ.

ಸರಕಾರಿ-ಖಾಸಗಿ ಸಹಭಾಗಿತ್ವದಲ್ಲಿ ಸರಕಾರ ರೂಪಿಸಿದ್ದ ಈ ವ್ಯವಸ್ಥೆಯಲ್ಲಿ ಮುಂದುವರಿಯಲು ಖಾಸಗಿ ಕಂಪನಿಗಳು ಆಸಕ್ತಿ ತೋರಿಸುತ್ತಿಲ್ಲ. ಇದರ ಹೊಣೆಯನ್ನು ರೈತ ಉತ್ಪಾದಕ ಕಂಪನಿಗಳ ಹೆಗಲಿಗೆ ಹೇರಲು ಸರಕಾರ ನಡೆಸುತ್ತಿರುವ ಪ್ರಯತ್ನ ಫಲ ನೀಡುತ್ತಿಲ್ಲ. ಇದರಿಂದಾಗಿ ರಾಜ್ಯದಲ್ಲಿ 2014-15ರಲ್ಲಿ ಆರಂಭಗೊಂಡಿದ್ದ 697 ಕೃಷಿ ಯಂತ್ರಧಾರೆ ಕೇಂದ್ರಗಳ ಪೈಕಿ, ನಿರ್ವಹಣೆ ಮಾಡುವವರಿಲ್ಲದೇ 167 ಕೇಂದ್ರಗಳು ಸಂಪೂರ್ಣವಾಗಿ ಮುಚ್ಚಿವೆ. ಉಳಿದ ಕೇಂದ್ರಗಳ ಪೈಕಿ ಬಹಳಷ್ಟು ಕೇಂದ್ರಗಳಲ್ಲಿ ಕೃಷಿ ಅಗತ್ಯಕ್ಕೆ ಬೇಕಾದ ಎಲ್ಲಾ ಯಂತ್ರಗಳೂ ಸಿಗುತ್ತಿಲ್ಲ. ಕೆಲವು ಕೇಂದ್ರಗಳಲ್ಲಿ ಯಂತ್ರಗಳಿದ್ದರೂ, ಅವುಗಳನ್ನು ಚಲಾಯಿಸುವವರಿಲ್ಲದೇ ಸ್ಥಗಿತಗೊಂಡಿದೆ.

ಎಫ್‌ಪಿಒಗಳಿಗೆ ಹೊಣೆ: 2014-15ರಲ್ಲಿ ಆರಂಭವಾದ ಕೃಷಿ ಯಂತ್ರಧಾರೆ ಕೇಂದ್ರಗಳು, 6 ವರ್ಷದ ಒಪ್ಪಂದದ ಅಡಿಯಲ್ಲಿ ರೈತರಿಗೆ ನೆರವು ನೀಡುತ್ತಿದ್ದವು. ಈ ಪೈಕಿ ಕೆಲ ಕೇಂದ್ರಗಳು ಪುನಃ 3ವರ್ಷದ ಅವಧಿಗೆ ವಿಸ್ತರಣೆಯನ್ನು ಪಡೆದರೆ, 167 ಕೇಂದ್ರಗಳು, ನವೀಕರಣಗೊಳ್ಳದೇ ಸ್ಥಗಿತಗೊಂಡಿವೆ. ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆಗಳಡಿ ಕಾರ್ಯನಿರ್ವಹಿಸುತ್ತಿರುವ ರೈತ ಉತ್ಪಾದಕ ಕೇಂದ್ರಗಳಿಗೆ ಹೊಣೆ ಒಪ್ಪಿಸಲು ಸರಕಾರ ಯೋಚಿಸುತ್ತಿದ್ದರೂ, ಎಫ್‌ಪಿಒಗಳು ಈ ಬಗ್ಗೆ ಆಸಕ್ತಿ ವಹಿಸುತ್ತಿಲ್ಲ.

ಎಫ್‌ಪಿಒಗಳ ಹಿಂದೇಟು ಏಕೆ?

- ಟ್ರ್ಯಾಕ್ಟರ್ ಸೇರಿದಂತೆ ಯಂತ್ರೋಪಕರಣಗಳ ನಿರ್ವಹಣೆಗೆ ಜಾಗದ ಕೊರತೆ
- ಯಂತ್ರೋಪಕರಣಗಳನ್ನು ಸುಸ್ಥಿತಿಯಲ್ಲಿ ಇರಿಸಿಕೊಳ್ಳುವ ತಲೆಬಿಸಿ
- ಟ್ರ್ಯಾಕ್ಟರ್ ಸೇರಿದಂತೆ ಯಂತ್ರೋಪಕರಣಗಳ ಚಾಲನೆಗೆ ಪರಿಣತ ಚಾಲಕರು ಸಿಗುತ್ತಿಲ್ಲ

ಕೃಷಿ ಯಂತ್ರಧಾರೆ ಏಕೆ?

ರಾಜ್ಯದಲ್ಲಿ ಪ್ರತಿ ವರ್ಷ 80 ಲಕ್ಷಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಚಟುವಟಿಕೆಗಳಲ್ಲಿ ರೈತರು ತೊಡಗುತ್ತಾರೆ. ಉಳುಮೆಗೆ ಟ್ರ್ಯಾಕ್ಟರ್, ಕಳೆ ಕೀಳುವ ಯಂತ್ರ, ಬಿತ್ತನೆ ಯಂತ್ರ, ಸೇರಿದಂತೆ ಕೃಷಿ ನಾನಾ ಹಂತದಲ್ಲಿ ಯಂತ್ರೋಪಕರಣಗಳ ಅಗತ್ಯತೆ ಬರುತ್ತದೆ. ಆದರೆ ಇದನ್ನು ಖರೀದಿಸಲು ರೈತರಿಗೆ ಹೊರೆಯಾಗುತ್ತದೆ. ಈ ಹೊರೆಯನ್ನು ತಪ್ಪಿಸಲು ಸರಕಾರ ಖಾಸಗಿ ಸಹಭಾಗಿತ್ವದಲ್ಲಿ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಆರಂಭಿಸುವ ಮೂಲಕ ಕಡಿಮೆ ಬಾಡಿಗೆಯಲ್ಲಿ ಯಂತ್ರಗಳನ್ನು ನೀಡುವ ವ್ಯವಸ್ಥೆ ಆರಂಭಿಸಿತ್ತು. ಇದರಿಂದ ರೈತರಿಗೆ ಯಂತ್ರೋಪಕರಣಗಳ ಸಮಸ್ಯೆಗೆ ಪರಿಹಾರ ಸಿಕ್ಕಿದಂತಾಗಿತ್ತು.

ಕೆಲ ಸಂಸ್ಥೆಗಳು ಯಂತ್ರಧಾರೆ ಕೇಂದ್ರ ತೆರೆಯಲು ನಿರಾಸಕ್ತಿ ತೋರುತ್ತಿದ್ದಾರೆ. ರೈತ ಉತ್ಪಾದಕ ಸಂಸ್ಥೆಗಳಲ್ಲಿ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಆರಂಭಿಸಲು ಮಾಹಿತಿ ನೀಡಲಾಗುತ್ತಿದೆ.

-**ಗಾಯತ್ರಿ**, ಉಪನಿರ್ದೇಶಕಿ, ಕೃಷಿ ಇಲಾಖೆ

ಎಫ್‌ಪಿಒಗಳಲ್ಲಿ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಆರಂಭಿಸಲು ಸ್ಥಳಾವಕಾಶ, ನಿರ್ವಹಣೆ ಸೇರಿದಂತೆ ಸಾಕಷ್ಟು ಸವಾಲುಗಳಿವೆ. ಸರಕಾರ ಈ ಬಗ್ಗೆ ಗಮನಹರಿಸಿ ಯಂತ್ರಧಾರೆ ಕೇಂದ್ರ ಆರಂಭಕ್ಕೆ ಸಹಕಾರ ನೀಡಬೇಕಿದೆ.

-**ಯಲ್ಲಪ್ಪ** ಸಿಇಒ, ರೈತ ಉತ್ಪಾದಕ ಸಂಸ್ಥೆ, ಬೂದಿಗೆರೆ

ರೈತರಿಗೆ ಸಮರ್ಪಕವಾಗಿ ಕೃಷಿಗೆ ಯಂತ್ರೋಪಕರಣಗಳು ಸಿಗುತ್ತಿಲ್ಲ. ಸರಕಾರ ಹೋಬಳಿ ಮಟ್ಟದಲ್ಲಿರುವ ರೈತ ಸಂಪರ್ಕ ಕೇಂದ್ರಗಳಲ್ಲಿಯೇ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಆರಂಭಿಸಿದರೆ ಅನುಕೂಲವಾಗುತ್ತದೆ.

-**ಸತೀಶ್** ಕಾರ್ಯದರ್ಶಿ, ರೈತ ಸಂಘ, ಬೆಂಗಳೂರು ಗ್ರಾಮಾಂತರ

06-07-2024
V-karnataka Pg 05

ಪಿಎಂ ಕಿಸಾನ್ ಸಮ್ಮಾನ್ ಮೊತ್ತ 2,000 ರೂ. ಹೆಚ್ಚಳ ಸಾಧ್ಯತೆ

ಹೊಸದಿಲ್ಲಿ: ಜುಲೈ ಕೊನೆ ವಾರ ಮಂಡನೆಯಾಗಲಿರುವ ಕೇಂದ್ರ ಮುಂಗಡಪತ್ರದಲ್ಲಿ ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಅಡಿಯಲ್ಲಿ ರೈತರಿಗೆ ನೀಡಲಾಗುತ್ತಿರುವ ನೆರವಿನ ಮೊತ್ತವನ್ನು ವಾರ್ಷಿಕ 6 ಸಾವಿರದಿಂದ 8 ಸಾವಿರ ರೂ.ಗೆ ಏರಿಸುವ ಸಾಧ್ಯತೆ ಇದೆ. ಬಜೆಟ್ ಪೂರ್ವ ಸಭೆಯಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈ ಕುರಿತು ಅಧಿಕಾರಿಗಳ ಜತೆ ಚರ್ಚೆ ನಡೆಸಿದ್ದಾರೆ.

2019ರ ಫೆಬ್ರವರಿ 29 ರಂದು ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಜಾರಿಗೆ ಬಂತು. ವಾರ್ಷಿಕವಾಗಿ ಮೂರು ಕಂತುಗಳಲ್ಲಿ ತಲಾ 2 ಸಾವಿರ ರೂ.ನಂತೆ ರೈತರಿಗೆ ವರ್ಗಾಯಿಸಲಾಗುತ್ತದೆ. ಇಲ್ಲಿಯತನಕ 11 ಕೋಟಿಗೂ ಹೆಚ್ಚು ರೈತರು ಈ ಯೋಜನೆಯ ಲಾಭ ಪಡೆದಿದ್ದಾರೆ. ಯೋಜನೆ ಆರಂಭವಾದಾಗಿನಿಂದ ರೈತರ ಖಾತೆಗೆ ಸೇರಿದ ಮೊತ್ತ 3.24 ಲಕ್ಷ ಕೋಟಿ ರೂಪಾಯಿ. 17ನೇ ಕಂತು ಕಳೆದ ಜೂನ್ 18ರಂದು ಬಿಡುಗಡೆಯಾಗಿದೆ.

ಪಿಎಂ ಕಿಸಾನ್ ಸಮ್ಮಾನ್ ನಿಧಿ ಮೂಲಕ ನೀಡುವ ನೆರವನ್ನು ಹೆಚ್ಚಿಸಬೇಕು ಎನ್ನುವುದು ಕೃಷಿ ವಲಯದ ಪ್ರಮುಖ ಬೇಡಿಕೆಯಾಗಿದೆ. ರೈತರಿಗೆ ಸಿಗುವ ಸಬ್ಸಿಡಿಗಳು ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ರೈತರಿಗೆ ತಲುಪಬೇಕು ಎಂದೂ ಕೃಷಿ ಕ್ಷೇತ್ರದ ಪ್ರಮುಖರು ಒತ್ತಾಯಿಸಿದ್ದಾರೆ.

ರಬ್ಬರ್ ದರ ಹೈ ಜಂಪ್ 12 ವರ್ಷಗಳಲ್ಲಿ ಗರಿಷ್ಠ ಬೆಲೆ

■ ಕೆ. ಗಂಗಾಧರ್ ಯಾದವ್ ಕಾಸರಗೋಡು
gangadhar.korekkana@timesofindia.com

ಕೇರಳ ರಾಜ್ಯದಲ್ಲಿ ರಬ್ಬರ್ ದರದಲ್ಲಿ ಮತ್ತೆ ಏರಿಕೆಯಾಗಿದೆ. 12 ವರ್ಷಗಳಲ್ಲಿ ಮೊದಲ ಬಾರಿಗೆ ಗರಿಷ್ಠ ದರ ದಾಖಲಾಗಿದೆ. ಕೊಚ್ಚಿ, ಕೊಟ್ಟಾಯಂ ಮಾರುಕಟ್ಟೆಗಳಲ್ಲಿ ಆರ್‌ಎಸ್‌ಎಸ್-4ಕ್ಕೆ ಕೆ.ಜಿ.ಗೆ 206 ರೂ. ತಲುಪಿದೆ. ಇದು ಈ ಅವಧಿಯ ಗರಿಷ್ಠ ದರ. ಮುಂದಿನ ದಿನಗಳಲ್ಲಿ ದರ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ.

- ■ ಕೆಜಿಗೆ 206 ರೂ
- ■ ಕೇರಳ, ಕರ್ನಾಟಕದ ರೈತರಿಗೆ ಬಂಪರ್
- ■ ವರದಾನದ ವಾದ ಆಮದು ಕೊರತೆ

ರಬ್ಬರ್ ದರ ಏರಿಕೆಯಾಗಿದ್ದರೂ ಕೇರಳದ ಸಣ್ಣ ರೈತರಿಗೆ ಹೆಚ್ಚಿನ ಪ್ರಯೋಜನವಿಲ್ಲ. ಮಳೆಯಿಂದಾಗಿ ಉತ್ಪಾದನೆ ಕಡಿಮೆ ಇರುವ ಸಮಯದಲ್ಲಿ ಬೆಲೆ ಏರಿಕೆ ಕೃಷಿಕರನ್ನು ಕಂಗಾಲಾಗಿಸಿದೆ. ಉತ್ಪಾದನೆ ಇಲ್ಲದ ಸಮಯದಲ್ಲಿ ಬೆಲೆ ಏರಿಕೆಯಾಗಿರುವುದು ಕಂಪನಿಗಳಿಗೆ ರಬ್ಬರ್ ಆಮದು ಮಾಡಿಕೊಳ್ಳಲು ಅವಕಾಶ ಕಲ್ಪಿಸಿದಂತಾಗಿದೆ ಎಂದು ಕೃಷಿಕರ ಸಂಘಟನೆಗಳು ಆರೋಪಿಸುತ್ತಿವೆ.

ದೇಶೀಯ ಮಾರುಕಟ್ಟೆಯಲ್ಲಿ 206 ರೂ.ನೊಂದಿಗೆ ರಬ್ಬರ್ ತನ್ನ ಗತವೈಭವವನ್ನು ತಲುಪಿದ್ದರೂ ಪ್ರಸ್ತುತ ರಬ್ಬರ್ ಶೀಟ್‌ಗಳಿಲ್ಲದ ಕಾರಣ ಇದರ ಪ್ರಯೋಜನ ಪಡೆಯಲು ಸಾಧ್ಯವಾಗುತ್ತಿಲ್ಲ. ಮಳೆಯಿಂದಾಗಿ ರಬ್ಬರ್ ಟ್ಯಾಪಿಂಗ್ ಸಾಧ್ಯವಾಗುತ್ತಿಲ್ಲ. ಈ ಮೊದಲೇ ಅಂದರೆ ಮೇ ಮತ್ತು ಜೂನ್ ತಿಂಗಳಲ್ಲಿ ಶೀಟ್‌ಗಳನ್ನು ಮಾರಾಟ ಮಾಡಿಯಾಗಿದೆ. ದಾಸ್ತಾನು ಮಾಡದ ಕಾರಣ ಕೃಷಿಕರು ಕಂಗಾಲಾಗಿದ್ದಾರೆ. ಈಗ ಶೇ.30ರಷ್ಟು ಕೃಷಿಕರು ಮಾತ್ರ ಮಳೆಗಾಲದಲ್ಲಿ ಟ್ಯಾಪಿಂಗ್ ಮಾಡಲು ಪ್ಲಾಸ್ಟಿಕ್ ಹಾಕುವ ಪ್ರಕ್ರಿಯೆ ಪೂರ್ಣಗೊಳಿಸಿದ್ದಾರೆ.

ಅನುಕೂಲಕರ ಹವಾಮಾನದ ನಂತರವೂ ಇದೇ ದರ ಉಳಿದರೆ ಮಾತ್ರ ಕೃಷಿಕರಿಗೆ ಇದರ ಪ್ರಯೋಜನ ಲಭಿಸುತ್ತದೆ. ಈ ನಡುವೆ ಟಯರ್ ಕಂಪನಿಗಳಿಗೆ ನೆರವಾಗಲು ಬೆಲೆ ಏರಿಕೆ ಮಾಡಲಾಗಿದೆ ಎಂಬ ಆರೋಪವೂ ಕೇಳಿಬಂದಿದೆ. ಹಡಗು ಮತ್ತು ಕಂಟೈನರ್ ಕೊರತೆಯೊಂದಿಗೆ ರಬ್ಬರ್ ಆಮದು ಕೊರತೆ ಪ್ರಸ್ತುತ ದೇಶೀಯ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಗೆ ಕಾರಣವಾಗಿದೆ ಎನ್ನಲಾಗಿದೆ.

06-07-2024
Ind Exp Pg 18

Bacterial hotspots

In your apple from seed to peel

NEXT time you pick your apples, remember it is not just about the crunch; it is about the bacteria. Recent studies conducted by researchers from Graz University of Technology, Austria, have shed light on the diverse bacterial communities residing within these ubiquitous fruits.

According to their findings, an average 240-grams apple harbours approximately 100 million bacteria. Different parts of the apple (the stem, peel, fruit pulp, seeds, and calyx) host distinct bacterial communities. Fruit pulp and seeds were found to be bacterial hotspots, while the peel showed lower colonisation.

The study compared organic and conventional apples, revealing distinct differences in their microbial profiles. The bacterial communities in apples were primarily composed of Proteobacteria (80%), Bacteroidetes (9%), Actinobacteria (5%), and Firmicutes (3%). Despite the similar overall structure, almost 40% of bacterial genera and orders differed significantly between organic and conventional apples. While both types contain similar total counts of bacteria, the types of bacteria present vary significantly. Conventional apples often host Escherichia coli and Shigella bacteria, although in low quantities, whereas these pathogens are notably absent in organic apples. Conversely, organic apples exhibit a more diverse and balanced microbial community, including beneficial bacteria such as Lactobacilli, which are associated with probiotic benefits.

The storage conditions post-harvest also influence the apple microbiome. Apples stored in controlled atmospheres show reduced growth of pathogenic fungi like Penicillium and Botrytis compared to those stored under ambient conditions. This suggests that storage practices can impact not only the fruit's physical condition but also its microbial ecosystem.

Geographical location plays a role as well, shaping the microbial composition of apples grown in different regions. This diversity not only affects the flavour profile but also potentially influences their health-promoting properties.

One notable microbial player in organic apples is Methylobacterium, which enhances the biosynthesis of strawberry-like flavour compounds. This finding suggests that the microbial community in apples contributes not only to their nutritional content but also to their sensory appeal. While these insights into the microbiome are promising, the researchers noted that further research is needed to fully understand how microbial diversity in apples translates into health benefits for consumers. They stated that understanding these dynamics could potentially lead to improved fruit storage practices, better crop management strategies, and enhanced consumer awareness of the nutritional and microbial aspects of fresh produce.

In sum, next time you enjoy an apple, remember that it is more than just a crunchy snack; it is a complex ecosystem of microbes that adds depth to both its flavour and potential health benefits.

100 MILLION BACTERIA IN ONE APPLE

Consuming a whole apple includes an approximate uptake of 100 million bacteria. However, freshly harvested, organically managed apples have a significantly more diverse and distinct microbiota as compared to the conventional ones. Organic apples have favourable health effects for the consumer, the plant and environment

06-07-2024
Hosadiganta
Pg 07

ಉಚಿತ ಕುರಿ ಸಾಕಾಣಿಕೆ ತರಬೇತಿಗೆ ಅರ್ಜಿ ಆಹ್ವಾನ

ಸೂಲಿಬೆಲೆ: ಹೋಬಳಿಯ ಸೊಣ್ಣಹಳ್ಳಿಪುರ ಗ್ರಾಮದ ಕೆನರಾ ಬ್ಯಾಂಕ್ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ನಿರುದ್ಯೋಗಿ ಮಹಿಳೆಯರು ಮತ್ತು ಪುರುಷರಿಗಾಗಿ 10 ದಿನಗಳ ಉಚಿತ ಕುರಿಸಾಕಾಣಿಕೆ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದ್ದು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಸ್ಥೆಯ ನಿರ್ದೇಶಕ ಅಂಬರೀಷ್ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯ 18 ವರ್ಷ ಮೇಲ್ಪಟ್ಟು 45 ವರ್ಷದೊಳಗಿನವರು ಜು. 15 ರಂದು ಸೋಮವಾರ ಬೆಳಿಗ್ಗೆ 10.30 ರಿಂದ ನಡೆಯುವ ನೇರ ಸಂದರ್ಶನದಲ್ಲಿ ಹಾಜರಾಗಲು ಕೋರಿದ್ದಾರೆ. ಗ್ರಾಮೀಣ ಭಾಗದ ಬಿಪಿಎಲ್ ಪಡಿತರ ಚೀಟಿ ಹೊಂದಿರುವವರಿಗೆ ಅಧ್ಯತೆ ನೀಡಲಾಗುತ್ತದೆ, 35 ಜನರಿಗೆ ಮಾತ್ರ ಅವಕಾಶವಿದ್ದು ಉಚಿತ ಊಟ, ವಸತಿ ವ್ಯವಸ್ಥೆ ಇದ್ದು ಹೆಚ್ಚಿನ ಮಾಹಿತಿಗಾಗಿ 8970476050 ಅಥವಾ 8660038694 ದೂರವಾಣಿ ಸಂಖ್ಯೆಗೆ ಸಂಪರ್ಕಿಸಲು ತಿಳಿಸಿದ್ದಾರೆ.

ರೈತರಿಗೆ ಮಾಹಿತಿ ನೀಡಿದ ಜಿಲ್ಲಾಧಿಕಾರಿ ಡಾ.ಎನ್.ಶಿವಶಂಕರ್

ದ್ರಾಕ್ಷಿ, ಮಾವು ಬೆಳೆ ವಿಮೆಗೆ ನೋಂದಾಯಿಸಿ

ದೊಡ್ಡಬಳ್ಳಾಪುರ: ತೋಟಗಾರಿಕಾ ಇಲಾಖೆ ವತಿಯಿಂದ 2024-25ನೇ ಸಾಲಿನ ಮುಂಗಾರು ಹಂಗಾಮಿನ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ (ಗಆಇಐಖ)ಯಡಿ ವಿವಿಧ ತೋಟಗಾರಿಕೆ ಬೆಳೆಗಳಿಗೆ ವಿಮೆ ಮಾಡಿಸಬಹುದಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಧೀನ ತಾಲೂಕುಗಳಾದ ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲೂಕುಗಳನ್ನು ವಿಮೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಹವಾಮಾನ ಅಂಶಗಳಾದ ತಾಪಮಾನ, ಗಾಳಿಯ ವೇಗ, ಮಳೆಯ ಪ್ರಮಾಣ, ಆರ್ದ್ರತೆ ಇತ್ಯಾದಿ ಮಾಹಿತಿಗಳನ್ನು ಸರ್ಕಾರದಿಂದ ಅಸೂಚಿತ ಟೆಲಿ ಮೆಟ್ರಿಕ್ ಮಳೆ ಮಾಪನ ಕೇಂದ್ರ ಮತ್ತು ಸ್ವಯಂಚಾಲಿತ ಹವಾಮಾನ ಕೇಂದ್ರಗಳಲ್ಲಿ ದಾಖಲಾಗುವ ಅಂಶಗಳ ಆಧಾರದ ಮೇಲೆ ಬೆಳೆ ವಿಮೆ ನಷ್ಟವನ್ನು ತೀರ್ಮಾನಿಸಲಾಗುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ಮತ್ತು ನೆಲಮಂಗಲ ತಾಲೂಕಿನ ಮಾವು ಬೆಳೆಯಲ್ಲಿ ಪ್ರತಿ ಹೆಕ್ಟೇರ್‌ಗೆ ವಿಮಾ ಮೊತ್ತ-80,000ರೂ, ರೈತರು ಪಾವತಿಸಬೇಕಾದ ದರ (ಶೇ.5%)-4,000, ದ್ರಾಕ್ಷಿ ಬೆಳೆಯಲ್ಲಿ ಪ್ರತಿ ಹೆಕ್ಟೇರ್‌ಗೆ ವಿಮಾ ಮೊತ್ತ-2,80,000ರೂ, ರೈತರು ಪಾವತಿಸಬೇಕಾದ ದರ (ಶೇ.5%ಗಳಲ್ಲಿ)-14,000, ಮಾವು ಮತ್ತು ದ್ರಾಕ್ಷಿ ಬೆಳೆಯುವ ರೈತ ಬಾಂಧವರು ಈ ಯೋಜನೆಯಡಿ ನೋಂದಾಯಿಸಿ ಉಪಯೋಗ ಪಡೆದುಕೊಳ್ಳುವುದು.

ಬೆಳೆ ಸಾಲ ಪಡೆದ ರೈತರಿಗೂ ಅವಕಾಶ

ಬೆಳೆ ಸಾಲ ಪಡೆದ ರೈತರನ್ನು ಸಂಬಂಧಿಸಿದ ಬ್ಯಾಂಕಿನವರು ವಿಮೆ ವ್ಯಾಪ್ತಿಗೆ ನೋಂದಾಯಿಸಲಿದ್ದು, ಯೋಜನೆಯಲ್ಲಿ ನೋಂದಾಯಿಸಿಕೊಳ್ಳಲು ಇಚ್ಚಿಸದ ರೈತರು ಸಂಬಂಧಿಸಿದ ಬ್ಯಾಂಕ್ ಶಾಖೆಯ ವ್ಯವಸ್ಥಾಪಕರಿಗೆ ನೋಂದಣಿಯ ಅಂತಿಮ ದಿನಾಂಕಕ್ಕಿಂತ 7 ದಿನಗಳು ಮುಂಚಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದ್ದಲ್ಲಿ ಅಂತಹ ರೈತರನ್ನು ಯೋಜನೆಯಿಂದ ಕೈಬಿಡಲು ಅವಕಾಶವಿರುತ್ತದೆ.

ಬೆಳೆಸಾಲಪಡೆಯದರೈತರುಯೋಜನೆಯಡಿಭಾಗವಹಿಸಲು ನಿಗದಿತ ಅರ್ಜಿಯೊಂದಿಗೆ ಪ್ರಸಕ್ತ ಸಾಲಿನ ಪಹಣಿ/ಕಂದಾಯ ರಶೀದಿ/ಖಾತೆ ಪುಸ್ತಕ/ ಬ್ಯಾಂಕ್ ಖಾತೆ ಪುಸ್ತಕ, ಆಧಾರ್ ನಕಲು ಪ್ರತಿ ಮತ್ತು ಸ್ವಯಂಘೋಷಿತ ಬೆಳೆ ವಿವರಗಳನ್ನು ಹತ್ತಿರದ ರಾಷ್ಟ್ರೀಯ ಅಧಿಕೃತ ಬ್ಯಾಂಕ್/ಸಾಮಾನ್ಯ ಸೇವಾ ಕೇಂದ್ರ/ ಗ್ರಾಮ ಒನ್ ಕೇಂದ್ರಗಳಲ್ಲಿ ನೋಂದಾಯಿಸಬಹುದು. ವಿಮೆ ಮಾಡಿಸುವ ರೈತರು ಫ್ರೂಟ್ಸ್ ತಂತ್ರಾಂಶದ ನೋಂದಣಿ ಸಂಖ್ಯೆಯನ್ನು ಹೊಂದಿರಬೇಕಿದ್ದು, ನೋಂದಣಿ ಸಂಖ್ಯೆಗೆ ಪಹಣಿ ವಿವರಗಳನ್ನು ಜೋಡಿಸಬೇಕಿರುತ್ತದೆ. ನೋಂದಣಿ ಸಂಖ್ಯೆ ಇಲ್ಲದ ರೈತರು ನೋಂದಣಿ ಸಂಖ್ಯೆಯನ್ನು ಮಾಡಿಕೊಂಡು ವಿಮೆಯಲ್ಲಿ ಪಾಲ್ಗೊಳ್ಳಬಹುದು.

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಮರು ವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಗೆ ಓಖಐಉ ಖಅ (ಕ್ಷೇಮ) ಅಧಿಸೂಚಿತ ವಿಮಾ ಸಂಸ್ಥೆಯಾಗಿದೆ. ವಿಮೆ ನೋಂದಣಿಗೆ ಕೊನೆಯ ದಿನಾಂಕ ಜುಲೈ 31 ಆಗಿರುತ್ತದೆ.

ಹೆಚ್ಚಿನ ಮಾಹಿತಿಗೆ ದೇವನಹಳ್ಳಿ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ)- 9480461234, ದೊಡ್ಡಬಳ್ಳಾಪುರ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ)- 9880210892, ಹೊಸಕೋಟೆ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ)- 8217210320, ನೆಲಮಂಗಲ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ)- 9880461607, ರೈತ ಸಂಪರ್ಕ ಕೇಂದ್ರದ ಅಧಿಕಾರಿ, ಹತ್ತಿರದ ಬ್ಯಾಂಕ್ ಶಾಖೆ ಹಾಗೂ ವಿಮಾ ಕಂಪನಿಯ ದೂ.ಸಂ-8884141262 ಸಹಾಯವಾಣಿ ಸಂಖ್ಯೆ- 080 26564537 ಈ ಸಂಖ್ಯೆಗಳಿಗೆ ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ಡಾ.ಎನ್.ಶಿವಶಂಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

06-07-2024
Hosadiganta Pg 07

ಅರಣ್ಯ ಕೃಷಿಕರಿಗೆ ತಬರನ ಶಿಕ್ಷೆ

ಮರ ಕಟಾವಿಗೆ ಕಂದಾಯ ಇಲಾಖೆಯಿಂದ ಜಮೀನಿನ ದೃಢೀಕರಣ ಪತ್ರ ಅಗತ್ಯ

ಬೀರೇಶ್ ಕಬಿನಿ ಮೈಸೂರು
beeresha.mahadeva@timesofindia.com

ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಅರಣ್ಯ ಕೃಷಿ ಕೈಗೊಂಡ ರೈತರು ಹಲವು ವರ್ಷ ಶ್ರಮವಹಿಸಿ ಬೆಳೆದ ಮರಗಳನ್ನು ಮಾರಾಟ ಮಾಡಲು ಅನುಮತಿಗಾಗಿ ಕಂದಾಯ ಇಲಾಖೆ ಕಚೇರಿಗೆ ವರ್ಷಗಟ್ಟಲೇ ಅಲೆದಾಡಬೇಕಾಗಿದೆ. ಇದು ಅರಣ್ಯಕೃಷಿಯಿಂದವಿಮುಖರಾಗುವಂತೆ ಮಾಡುತ್ತಿದೆ.

ಖಾಸಗಿ ಹಾಗೂ ರೈತರ ಜಮೀನಿನಲ್ಲಿ ಅರಣ್ಯ ಬೆಳೆಸಿದಲ್ಲಿ ನಿಗದಿತ ಗುರಿಗಿಂತ ಹೆಚ್ಚು ಪ್ರಮಾಣದಲ್ಲಿ ಅರಣ್ಯ ಸೃಷ್ಟಿಸಲು ಸಾಧ್ಯ. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆಯಿಂದಲೇ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ರೈತರಿಗೆ ಸಸಿಗಳನ್ನು ವಿತರಿಸಿ ಜಮೀನಿನಲ್ಲಿ ಬೆಳೆಸಲು ಸಹಕಾರ ನೀಡಲಾಗುತ್ತಿದೆ. ಮೈಸೂರು ಹಾಗೂ ಹುಣಸೂರು ವಿಭಾಗಗಳಿಂದ ಪ್ರತಿ ವರ್ಷ ಕನಿಷ್ಠ 10 ಲಕ್ಷ ಸಸಿ ಬೆಳೆಸಿ ಒಂದು ಸಾವಿರಕ್ಕೂ ಹೆಚ್ಚು ರೈತರಿಗೆ ವಿತರಿಸಲಾಗುತ್ತಿದೆ. 20 ವರ್ಷಗಳಿಂದ ಸಾವಿರಾರು ರೈತರು ಅರಣ್ಯ ಕೃಷಿ ಕೈಗೊಂಡಿದ್ದಾರೆ.

ಅರಣ್ಯ ಕೃಷಿಗೆ ತೊಡಕೇನು?: ಅರ್ಜಿದಾರರು ಕಟಾವಿಗೆ ಅನುಮತಿ ಕೇಳಿರುವ ಮರಗಳು ಅವರಿಗೆ ಸಂಬಂಧಿಸಿದ ಜಮೀನಲ್ಲೇ ಇದೆಯೇ ಎಂಬುದನ್ನು ದೃಢೀಕರಿಸುವಂತೆ ಕಂದಾಯ ಇಲಾಖೆಗೆ ಅರಣ್ಯ ಇಲಾಖೆ ಪತ್ರ ಬರೆದಿದೆ. ಆದರೆ, ಕಂದಾಯ ಇಲಾಖೆ ಅಭಿಪ್ರಾಯ ನೀಡಲು ವರ್ಷಗಟ್ಟಲೇ ವಿಳಂಬ ಮಾಡುತ್ತಿದೆ.

> **ಕಂದಾಯ ಇಲಾಖೆಯಿಂದ ಅರಣ್ಯ ಕೃಷಿಕರ ಮರ ಮಾರಾಟಕ್ಕೆ ಅಭಿಪ್ರಾಯ ನೀಡುವುದು ವಿಳಂಬವಾಗುತ್ತಿದೆ. ತಂತ್ರಜ್ಞಾನ ಬಳಕೆ ಮಾಡಿಕೊಂಡು ನಿಯಮ ಸರಳೀಕರಣ ಮಾಡುವ ಅಗತ್ಯವಿದೆ.**
>
> **-ಲಕ್ಷ್ಮೀಕಾಂತ್** ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ.

ಏನಿದು ಅರಣ್ಯ ಯೋಜನೆ?: ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಸಸಿ ಪಡೆದು ಬೆಳೆಸುವ ರೈತರಿಗೆ ಮೊದಲ ವರ್ಷ ಒಂದು ಸಸಿಗೆ 30 ರೂ., 2, 3ನೇ ವರ್ಷ 40 ರೂ.ನಂತೆ ನೀಡಲಾಗುತ್ತಿದೆ. ಈ ರೀತಿಯಾಗಿ ಬೆಳೆದ 19 ಜಾತಿ ಮರ ಮಾರಾಟ ಮಾಡಲು ಅನುಮತಿ ಬೇಕಿಲ್ಲ. ಆದರೆ, ಇವುಗಳಿಗೆ ಹೊರತಾದ ಹೆಬ್ಬೇವು, ಮಹಾಗನಿ, ಸಿಲ್ವರ್, ತೇಗ, ಶ್ರೀಗಂಧದಂತಹ ಕೆಲವು ಜಾತಿಯ ಮರಗಳ ಮಾರಾಟಕ್ಕೆ ಅರಣ್ಯ, ಕಂದಾಯ ಇಲಾಖೆ ಅನುಮತಿ ಬೇಕಿದೆ. 10ರಿಂದ 25 ವರ್ಷಗಳ ಅಂತರದಲ್ಲಿ ಈ ಮರಗಳು ಕಟಾವಿಗೆ ಬರುತ್ತವೆ.

ಪರಿಹಾರವೇನು? ಕೃಷಿ ಇಲಾಖೆಯ ಪ್ರತಿ ವರ್ಷ ಬೆಳೆ ಸಮೀಕ್ಷೆ ಮಾಡುವಾಗ ಮರಗಳನ್ನೂ ಅದರೊಟ್ಟಿಗೆ ಸೇರಿಸಬಹುದು. ಅಲ್ಲದೆ, ಕೃಷಿ ಇಲಾಖೆ ಬಳಕೆ ಮಾಡುವ ದಿಶಾಂಕ್ ಆ್ಯಪ್, ಇ-ಪರಿಹಾರ ಆ್ಯಪ್ ಬಳಕೆ ಮಾಡಿಕೊಂಡು ಮರಗಳು ಆಯಾ ಜಮೀನಿನಲ್ಲಿಯೇ ಬೆಳೆದಿರುವ ಬಗ್ಗೆ ಅರಣ್ಯ ಇಲಾಖೆ ದಾಖಲೀಕರಣ ಮಾಡಿಸಬಹುದು. ಆಗ ಪ್ರತ್ಯೇಕವಾಗಿ ಕಂದಾಯ ಇಲಾಖೆ ಅಭಿಪ್ರಾಯ ಪಡೆ ಯುವ ಅಗತ್ಯವಿರು ವುದಿಲ್ಲ ಎಂಬುದು ರೈತರ ಅಭಿಪ್ರಾಯ.

06-07-2024
V-karnataka Pg 02

06-07-2024
Prajavani Pg 10

ಕೆ.ಜಿಗೆ ₹80: ಕೋಲಾರ, ಚಿತ್ತೂರಿನಿಂದ ಪೂರೈಕೆ ಹೆಚ್ಚಳ ನಿರೀಕ್ಷೆ

ಟೊಮೆಟೊ ಬೆಲೆ ಏರಿಕೆ ಬಿಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ವಿವಿಧ ಚಿಲ್ಲರೆ ಮಾರುಕಟ್ಟೆಗಳಲ್ಲಿ ಟೊಮೆಟೊ ಧಾರಣೆಯು ಪ್ರತಿ ಕೆ.ಜಿಗೆ ₹80 ದಾಟಿದ್ದು, ಗ್ರಾಹಕರು ತತ್ತರಿಸಿದ್ದಾರೆ.

ಹಿಮಾಚಲ ಪ್ರದೇಶದಲ್ಲಿ ಭಾರಿ ಮಳೆಯಿಂದಾಗಿ ಟೊಮೆಟೊ ಪೂರೈಕೆಯಲ್ಲಿ ವ್ಯತ್ಯಯವಾಗಿದೆ.

ಕರ್ನಾಟಕ ಹಾಗೂ ಆಂಧ್ರಪ್ರದೇಶದಲ್ಲಿ ಬೇಸಿಗೆ ಅವಧಿಯಲ್ಲಿ ಬೆಳೆದಿರುವ ಟೊಮೆಟೊ ಬೆಳೆಯು ರೋಗ ಬಾಧೆಗೆ ತುತ್ತಾಗಿದೆ. ಜೊತೆಗೆ, ತಾಪಮಾನ ಹೆಚ್ಚಳದಿಂದಾಗಿ ಈ ಎರಡು ರಾಜ್ಯಗಳಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಉತ್ಪಾದನೆಯಲ್ಲಿ ಶೇ 35ರಷ್ಟು ಇಳಿಕೆಯಾಗಿದೆ. ಹಾಗಾಗಿ, ಪೂರೈಕೆಯಲ್ಲಿ ಕೊರತೆಯಾಗಿದ್ದು, ಬೆಲೆ ಏರಿಕೆಗೆ ಕಾರಣವಾಗಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

ಬಿಸಿ ಗಾಳಿ ಕೂಡ ಧಾರಣೆ ಏರಿಕೆಗೆ ಕಾರಣವಾಗಿದೆ. ನವದೆಹಲಿಯಲ್ಲಿ ಮದರ್ ಡೇರಿಯು ತನ್ನ 'ಸಫಲ್' ಮಳಿಗೆಗಳ ಮೂಲಕ ಪ್ರತಿ ಕೆ.ಜಿಗೆ ₹75 ದರದಲ್ಲಿ ಟೊಮೆಟೊ ಮಾರಾಟ ಮಾಡುತ್ತಿದೆ.

ದೇಶದ ಕೆಲವು ಭಾಗಗಳಲ್ಲಿ ಟೊಮೆಟೊ ಚಿಲ್ಲರೆ ಧಾರಣೆಯು ಕಳೆದ ಒಂದು ತಿಂಗಳ ಅವಧಿಯಲ್ಲಿ ದುಪ್ಪಟ್ಟಾಗಿದೆ.

ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯದ ಅಧೀನದಲ್ಲಿ ಬರುವ ಬೆಲೆ ನಿಯಂತ್ರಣ ವಿಭಾಗದ ಮಾಹಿತಿ ಪ್ರಕಾರ, ಪ್ರಸ್ತುತ ದೇಶದಲ್ಲಿ ಟೊಮೆಟೊದ ಸರಾಸರಿ ಬೆಲೆ ಕೆ.ಜಿಗೆ ₹58.2 ಇದೆ. ಕಳೆದ ತಿಂಗಳಿನಲ್ಲಿ ಇದ್ದ ಚಿಲ್ಲರೆ ದರಕ್ಕೆ ಹೋಲಿಸಿದರೆ ಶೇ 64.45ರಷ್ಟು ಏರಿಕೆಯಾಗಿದೆ. ಸಗಟು ದರದಲ್ಲಿ ಶೇ 73.24ರಷ್ಟು ಹೆಚ್ಚಳವಾಗಿದೆ.

ಒಂದು ತಿಂಗಳ ಅವಧಿಯಲ್ಲಿ ಚಿಲ್ಲರೆ ಈರುಳ್ಳಿ ದರ ಶೇ 32.19, ಆಲೂಗೆಡ್ಡೆ ಧಾರಣೆ ಶೇ 17.09ರಷ್ಟು ಏರಿಕೆಯಾಗಿದೆ. ಪ್ರತಿ ಕೆ.ಜಿ ಈರುಳ್ಳಿ ಬೆಲೆಯು ₹32.53ರಿಂದ ₹43ಕ್ಕೆ ಮುಟ್ಟಿದೆ.

ಕಳೆದ ವರ್ಷದ ಮುಂಗಾರು ಅವಧಿಯಲ್ಲಿ ಟೊಮೆಟೊ ಬೆಲೆ ಏರಿಕೆ ಕಂಡಿತ್ತು. ಆ ವರ್ಷದ ಜುಲೈ–ಆಗಸ್ಟ್‌ನಲ್ಲಿ ಪ್ರತಿ ಕೆ.ಜಿಗೆ ₹350 ದಾಟಿತ್ತು. ಬಳಿಕ ಸೆಪ್ಟೆಂಬರ್ ವೇಳೆಗೆ ಇಳಿಕೆ ಕಂಡಿತ್ತು. ಈ ಬಾರಿಯೂ ಹಿಂದಿನ ವರ್ಷದ ಸ್ಥಿತಿಯೇ ಮುಂದುವರಿಯುವ ಸಾಧ್ಯತೆಯಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಪೂರೈಕೆ ಹೆಚ್ಚಳ ನಿರೀಕ್ಷೆ: 'ಕರ್ನಾಟಕದ ಕೋಲಾರ ಜಿಲ್ಲೆಯಲ್ಲಿ ಟೊಮೆಟೊ ಕಟಾವಿಗೆ ಬಂದಿದ್ದು, ಶೀಘ್ರವೇ, ಮಾರುಕಟ್ಟೆಗೆ ಪೂರೈಕೆಯಾಗಲಿದೆ. ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಿಂದಲೂ ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆಯಾಗಲಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಎರಡು ಜಿಲ್ಲೆಗಳಲ್ಲಿ ಉತ್ಪಾದನೆಯು ಉತ್ತಮವಾಗಿದೆ' ಎಂದು ಕೇಂದ್ರ ಕೃಷಿ ಸಚಿವಾಲಯ ತಿಳಿಸಿದೆ.

ಆಹಾರ ತಯಾರಿಕಾ ವೆಚ್ಚ ಏರಿಕೆ: ಟೊಮೆಟೊ, ಆಲೂಗೆಡ್ಡೆ, ಈರುಳ್ಳಿ ಬೆಲೆ ಏರಿಕೆಯಿಂದಾಗಿ ಜೂನ್‌ನಲ್ಲಿ ಮನೆಯಲ್ಲಿ ತಯಾರಿಸುವ ಆಹಾರದ ವೆಚ್ಚದಲ್ಲಿ ಶೇ 10ರಷ್ಟು ಏರಿಕೆಯಾಗಿದೆ ಎಂದು ಕ್ರೆಡಿಟ್ ರೇಟಿಂಗ್ಸ್ ಸಂಸ್ಥೆ ಕ್ರಿಸಿಲ್ ತಿಳಿಸಿದೆ.

ಮೇ ತಿಂಗಳಿನಲ್ಲಿ ಮನೆಯಲ್ಲಿ ಒಂದು ಪ್ಲೇಟ್ ಸಸ್ಯಾಹಾರ ತಯಾರಿಕೆ ವೆಚ್ಚ ₹26.7 ಇತ್ತು. ಜೂನ್‌ನಲ್ಲಿ ₹29.4ಕ್ಕೆ ತಲುಪಿದೆ. ಟೊಮೆಟೊ, ಈರುಳ್ಳಿ, ಆಲೂಗೆಡ್ಡೆ ಬೆಲೆ ಏರಿಕೆಗೆ ಪ್ರತಿಕೂಲ ಹವಾಮಾನವೇ ಕಾರಣ ಎಂದು ತಿಳಿಸಿದೆ.

'ಕಳೆದ ವರ್ಷದ ನವೆಂಬರ್ ನಿಂದಲೂ ಮನೆಯಲ್ಲಿ ತಯಾರಿಸುವ ಸಸ್ಯಾಹಾರದ ಥಾಲಿ ದರದಲ್ಲಿ ಏರಿಕೆ ಯಾಗುತ್ತಿದೆ. ತರಕಾರಿಗಳ ಬೆಲೆ ಏರಿಕೆಯು ಇದಕ್ಕೆ ಕೊಡುಗೆ ನೀಡಿದೆ' ಎಂದು ಕ್ರಿಸಿಲ್ ಮಾರ್ಕೆಟ್ ಇಂಟೆಲಿಜೆನ್ಸ್ ಆ್ಯಂಡ್ ಆ್ಯನಲಟಿಕ್ಸ್‌ನ (ಸಂಶೋಧನಾ) ನಿರ್ದೇಶಕ ಪೂಶನ್ ಶರ್ಮಾ ತಿಳಿಸಿದ್ದಾರೆ.

ಈರುಳ್ಳಿ ಬೆಲೆ ಸ್ಥಿರ: ಕೇಂದ್ರ ಹೇಳಿಕೆ

ನವದೆಹಲಿ (ಪಿಟಿಐ): ದೇಶೀಯ ಮಾರುಕಟ್ಟೆಯಲ್ಲಿ ಈರುಳ್ಳಿ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗಿಲ್ಲ. ಚಿಲ್ಲರೆ ಬೆಲೆಯೂ ಸ್ಥಿರವಾಗಿದೆ ಎಂದು ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯವು ಶುಕ್ರವಾರ ತಿಳಿಸಿದೆ.

'ಮುಂಗಾರು ಋತುವಿನಲ್ಲಿ ಸಕಾಲದಲ್ಲಿ ಮಳೆ ಸುರಿದಿರುವುದು ಈರುಳ್ಳಿ, ಟೊಮೆಟೊ, ಆಲೂಗೆಡ್ಡೆ ಬೆಳೆಗೆ ವರದಾನವಾಗಿದೆ' ಎಂದು ತಿಳಿಸಿದೆ.

ಹಿಂಗಾರು ಅವಧಿಯಲ್ಲಿ ಈರುಳ್ಳಿ ಉತ್ಪಾದನೆ ಕುಂಠಿತವಾಗಿತ್ತು. ಮುಂಗಾರು ಅವಧಿಯಲ್ಲಿ 3.61 ಲಕ್ಷ ಹೆಕ್ಟೇರ್‌ನಲ್ಲಿ ಈರುಳ್ಳಿ ಬಿತ್ತನೆ ಗುರಿ ಹೊಂದಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಬಿತ್ತನೆ ಪ್ರದೇಶದಲ್ಲಿ ಶೇ 27ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ. ಕರ್ನಾಟಕದಲ್ಲಿ 1.50 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. ಈ ಪೈಕಿ ಇಲ್ಲಿಯವರೆಗೆ ಶೇ 30ರಷ್ಟು ಪ್ರದೇಶದಲ್ಲಿ ಬಿತ್ತನೆ ಪೂರ್ಣಗೊಂಡಿದೆ. ಇತರೆ ರಾಜ್ಯಗಳಲ್ಲೂ ಬಿತ್ತನೆ ಚುರುಕುಗೊಂಡಿದೆ ಎಂದು ತಿಳಿಸಿದೆ.

06-07-2024
V-karnataka
Pg 01

ರೈತರ ಪಂಪ್‌ಸೆಟ್‌ಗಳಿಗೆ ಆಧಾರ್ ಲಿಂಕ್ ಕಡ್ಡಾಯ

ಸದ್ದಿಲ್ಲದೆ ಆರಂಭವಾಗಿದೆ ಆಧಾರ್ ಸಂಖ್ಯೆ ಜೋಡಣೆ ಪ್ರಕ್ರಿಯೆ ಮುಂದಿನ ದಿನಗಳಲ್ಲಿ ಅನ್ನದಾತರ ವಿದ್ಯುತ್ ಸಬ್ಸಿಡಿಗೆ ಕತ್ತರಿ?

■ ವಿಜಯ ಕುಮಾರ ಚಂದರಗಿ

ಉದಯವಾಣಿ ಸಮಾಚಾರ

ಬೆಂಗಳೂರು: ಕೃಷಿ ಪಂಪ್‌ಸೆಟ್‌ಗಳ ಆರ್.ಆರ್. ಸಂಖ್ಯೆಯನ್ನು ಗ್ರಾಹಕರ ಆಧಾರ್ ಸಂಖ್ಯೆಗೆ 'ಲಿಂಕ್' ಮಾಡುವ ಪ್ರಕ್ರಿಯೆಗೆ ವಿದ್ಯುತ್ ಸರಬರಾಜು ಕಂಪನಿ (ಎಸ್ಕಾಂ)ಗಳು ಸದ್ದಿಲ್ಲದೆ ಚಾಲನೆ ನೀಡಿವೆ. ಬಹುತೇಕ ಕಡೆಗಳಲ್ಲಿ ಆಧಾರ್–ಆರ್.ಆರ್. ಸಂಖ್ಯೆಗೆ ಒಂದಕ್ಕೊಂದು ತಾಳೆ ಆಗದಿರುವುದು ಕಂಡುಬಂದಿದ್ದು, ಮುಂಬರುವ ದಿನಗಳಲ್ಲಿ ಸಬ್ಸಿಡಿಗೆ ಕತ್ತರಿ ಬೀಳುವ ಆತಂಕ ರೈತರನ್ನು ಕಾಡತೊಡಗಿದೆ.

ಸದ್ಯಕ್ಕೆ ಜೋಡಣೆ ಪ್ರಕ್ರಿಯೆ ಪ್ರಾರಂಭಿಕ ಹಂತದಲ್ಲಿದೆ. ಮುಗಿದ ನಂತರ ತಾಳೆಯಾಗದ ರೈತರ ಸಬ್ಸಿಡಿಗೆ ಕತ್ತರಿ ಬೀಳುವ ಸಾಧ್ಯತೆಯೂ ಇದೆ. ಗ್ಯಾರಂಟಿ ಸೇರಿ ಸರ್ಕಾರದ ವಿವಿಧ ಸಬ್ಸಿಡಿ ಯೋಜನೆಗಳಿಗೆ ಈಗಾಗಲೇ ಆಧಾರ್ ಜೋಡಣೆ ಮಾಡಲಾಗಿದೆ. ▶ 8ನೇ ಪುಟಕ್ಕೆ

ಜೋಡಣೆ ಉದ್ದೇಶವೇನು?

- ಸರ್ಕಾರ ಪ್ರತಿ ವರ್ಷ ಎಸ್ಕಾಂಗಳಿಗೆ ನೀಡುತ್ತಿರುವ ಸಬ್ಸಿಡಿಗೂ ಹಾಗೂ ವಿದ್ಯುತ್ ಬಳಕೆಗೂ ಹೋಲಿಕೆ ಆಗುತ್ತಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು
- ರಾಜ್ಯದಲ್ಲಿರುವ ಅಕ್ರಮ ಪಂಪ್‌ಸೆಟ್‌ಗಳಿಗೆ ಕಡಿವಾಣ ಹಾಕುವುದು
- ಸಬ್ಸಿಡಿ ನಿಜವಾದ ಫಲಾನುಭವಿಗಳಿಗೆ ಹೋಗುತ್ತಿದೆಯೇ ಎಂಬುದನ್ನು ದೃಢಪಡಿಸಿಕೊಳ್ಳುವುದು
- ಉಚಿತ ವಿದ್ಯುತ್ ಪಡೆಯುತ್ತಿರುವ ಶ್ರೀಮಂತರನ್ನು ಪತ್ತೆ ಹಚ್ಚುವುದು.

ರೈತರ ಪಂಪ್‌ಸೆಟ್‌ಗಳಿಗೆ ಆಧಾರ್ ಲಿಂಕ್ ಕಡ್ಡಾಯ

1ನೇ ಪುಟದಿಂದ ▶ ಮುಂದುವರಿದ ಭಾಗವಾಗಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ)ವು 2024–25ನೇ ಸಾಲಿನ ವಿದ್ಯುತ್ ದರ ಪರಿಷ್ಕರಣೆ ಆದೇಶದಲ್ಲಿ ಕೃಷಿ ಪಂಪ್‌ಸೆಟ್‌ಗಳ ಆರ್.ಆರ್. ಸಂಖ್ಯೆಯನ್ನು ವಿಶೇಷ ಗುರುತಿನ ಸಂಖ್ಯೆ 'ಆಧಾರ್'ಗೆ ಜೋಡಣೆ ಕಡ್ಡಾಯಗೊಳಿಸಿದ್ದು ಈ ಸಂಬಂಧ ಎಸ್ಕಾಂಗಳಿಗೆ ಸೂಚನೆ ನೀಡಿತ್ತು. ಅದರಂತೆ 10 ಎಚ್‌ಪಿ ಸಾಮರ್ಥ್ಯದವರೆಗಿನ ಪಂಪ್‌ಸೆಟ್ ಹೊಂದಿರುವ ರೈತರ ಆಧಾರ್ ಸಂಖ್ಯೆ ಸಂಗ್ರಹಿಸುವ ಕಾರ್ಯ ನಡೆದಿದೆ. ಆದರೆ, ಹೀಗೆ ಸಂಗ್ರಹಿಸಲಾದ ಬಹುತೇಕ ಆರ್.ಆರ್. ಸಂಖ್ಯೆಗಳಿಗೂ ಮತ್ತು ಆಧಾರ್ ಸಂಖ್ಯೆಗೂ ತಾಳೆ ಆಗುತ್ತಿಲ್ಲ.

ಎಷ್ಟೋ ಕಡೆಗಳಲ್ಲಿ ಹೆಸರು ಬದಲಾಗಿವೆ. ಮತ್ತೆ ಹಲವು ಕಡೆಗಳಲ್ಲಿ ತಪ್ಪಾಗಿ ಮುದ್ರಿತವಾಗಿರುತ್ತವೆ. ಈ ಬಗ್ಗೆ ರೈತರನ್ನು ಕೇಳಿದಾಗ, ಅವರ ತಂದೆ ಅಥವಾ ತಾತನ ಹೆಸರಿನಲ್ಲಿ ಪಂಪ್‌ಸೆಟ್‌ಗಳಿರುತ್ತವೆ. ಬದಲಾವಣೆ ಮಾಡಿಕೊಂಡಿರುವುದಿಲ್ಲ. ಸದ್ಯಕ್ಕೆ ಇನ್ನೂ ಜೋಡಣೆ ಪ್ರಕ್ರಿಯೆ ಪ್ರಾರಂಭಿಕ ಹಂತದಲ್ಲಿದೆ. ಹಾಗಾಗಿ, ಇದರ ಬಿಸಿ ತಟ್ಟದಿರಬಹುದು. ಮುಗಿದ ನಂತರ ತಾಳೆಯಾಗದ ರೈತರ ಸಬ್ಸಿಡಿಗೆ ಕತ್ತರಿ ಬೀಳಲಿದೆಯೇ ಎಂಬ ಆತಂಕ ಕಾಡತೊಡಗಿದೆ. ರಾಜ್ಯದಲ್ಲಿ ಸುಮಾರು 34.17 ಲಕ್ಷ ರೈತರು ಸರ್ಕಾರ ಕೃಷಿ ಪಂಪ್‌ಸೆಟ್‌ಗಳಿಗೆ ನೀಡುವ ಉಚಿತ ವಿದ್ಯುತ್‌ನ ಫಲಾನುಭವಿಗಳಾಗಿದ್ದು ವಾರ್ಷಿಕ ಅಂದಾಜು 21 ಸಾವಿರ ಮಿಲಿಯನ್ ಯೂನಿಟ್ ವಿದ್ಯುತ್ ಪೂರೈಸಲಾಗುತ್ತಿದೆ. ಇದರ ಸಬ್ಸಿಡಿ ಮೊತ್ತ ಸುಮಾರು 10–11 ಸಾವಿರ ಕೋಟಿ ರೂ. ಆಗಿದ್ದು ಆಯಾ ಎಸ್ಕಾಂಗಳಿಗೆ ಈ ಮೊತ್ತವನ್ನು ಸರ್ಕಾರ ಪಾವತಿಸುತ್ತದೆ.

ಎಸ್ಕಾಂ	ಫಲಾನುಭವಿ ರೈತರು	ವಾರ್ಷಿಕ ಬಳಕೆ (ಮಿ.ಯೂ.ನಲ್ಲಿ)
ಬೆಸ್ಕಾಂ	10,43,427	6,140
ಮೆಸ್ಕಾಂ	4,15,739	1,634
ಹೆಸ್ಕಾಂ	10,21,548	6,902
ಜೆಸ್ಕಾಂ	4,39,477	3,659
ಸೆಸ್ಕ್	4,96,937	3,084
ಒಟ್ಟು	34,17,128	21,419

ಅನುಮತಿ ಕಡ್ಡಾಯ; ಪ್ರಾಧಿಕಾರಕ್ಕೆ ಪತ್ರ: ಈ ನಡುವೆ ಮೂಲಗಳ ಪ್ರಕಾರ ಈಗಾಗಲೇ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಸೇರಿದಂತೆ ಎಲ್ಲ ಎಸ್ಕಾಂಗಳು ರೈತರ ಆಧಾರ್ ಸಂಖ್ಯೆಯನ್ನು ಸಂಗ್ರಹಿಸಿ, ಆಯಾ ಆರ್.ಆರ್. ಸಂಖ್ಯೆವುಳ್ಳ ದತ್ತಾಂಶದೊಂದಿಗೆ ದಾಖಲಿಸಲಾಗಿದೆ. ಆದರೆ, ಲಿಂಕ್ ಮಾಡಲು ಸಾಧ್ಯವಾಗಿಲ್ಲ. ಯಾಕೆಂದರೆ, ಇದಕ್ಕೆ ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರದ ಅನುಮತಿ ಕಡ್ಡಾಯ ಎನ್ನಲಾಗಿದೆ. ಈ ಸಂಬಂಧ ಪ್ರಾಧಿಕಾರಕ್ಕೆ ಪತ್ರ ಬರೆದಿದ್ದು, ಅನುಮತಿ ದೊರೆಯುತ್ತಿದ್ದಂತೆ ಜೋಡಣೆ ಮಾಡುವ ಕೆಲಸ ಆರಂಭವಾಗಲಿದೆ.

ಕೆಇಆರ್‌ಸಿ ಸೂಚನೆ ಏನಿತ್ತು?: ರಾಜ್ಯದಲ್ಲಿರುವ ಕೃಷಿ ಪಂಪ್‌ಸೆಟ್‌ಗಳು ಎಷ್ಟು ಮತ್ತು ಅವುಗಳಲ್ಲಿ ಎಷ್ಟು ಚಾಲ್ತಿಯಲ್ಲಿವೆ ಎಂಬುದರ ಸಮೀಕ್ಷೆಗೆ ಪಂಪ್‌ಸೆಟ್‌ಗಳಿಗೆ ಜಿಪಿಎಸ್ ಅಳವಡಿಸುವಂತೆ ಕೆಇಆರ್‌ಸಿ ಸೂಚಿಸಿತ್ತು. ಇದಾದ ನಂತರ ಕೃಷಿ ಪಂಪ್‌ಸೆಟ್‌ಗಳ ಆಡಿಟ್ ಮಾಡುವಂತೆಯೂ ಹೇಳಿತ್ತು.